

## ಹಳ್ಳಿ ಮಕ್ಕಳ ಕರಕೌಶಲ

ಈಚೆಗೆ ಕೊಪ್ಪ ಗ್ರಾಮಾಂತರ ಪ್ರದೇಶದ ಮಕ್ಕಳ ಗ್ರಾಮಸಭೆಯೊಂದಕ್ಕೆ ಹೋಗಿದ್ದೆ. ಕಾರ್ಯಕ್ರಮದ ನಿರೂಪಣೆ, ಪ್ರಾರ್ಥನೆ, ಸ್ವಾಗತ ಭಾಷಣ, ಸಭೆಯ ಅಧ್ಯಕ್ಷತೆ ಈ ಎಲ್ಲದರಲ್ಲಿಯೂ ಮಕ್ಕಳು ಲವಲವಿಕೆಯಿಂದ ತೊಡಗಿದ್ದರು. ಸಮಯ ಸ್ಫೂರ್ತಿಯಿಂದ ಒಂದೊಂದು ನಾಣ್ಣುಡಿ ಹೇಳುತ್ತಾ ಹೆಣ್ಣು ಮಕ್ಕಳಿಬ್ಬರು ಕಾರ್ಯಕ್ರಮದ ನಿರೂಪಣೆ ಮಾಡಿದ್ದು ಸೊಗಸಾಗಿತ್ತು. ಇನ್ನು ಅತಿಥಿಗಳನ್ನು ವೇದಿಕೆಗೆ ಬರಮಾಡಿಕೊಳ್ಳುವಾಗ, ಸ್ಥಳೀಯವಾಗಿ ದೊರಕುವ ತೆಂಗಿನಗರಿ, ಸೊಪ್ಪು, ಹೂವುಗಳನ್ನು ಬಳಸಿ ಮಕ್ಕಳೇ ಮಾಡಿದ ಹೂಗುಚ್ಛಗಳನ್ನು ನೀಡಿದ್ದು ಅವರ ಸೃಜನಶೀಲತೆಗೆ ಹಿಡಿದ ಕನ್ನಡಿಯಾಗಿತ್ತು.

—ಎಸ್.ಎನ್. ಚಂದ್ರಕಲಾ ಕೊಪ್ಪ







## ಮುಕ್ತಿನಾಥನ ಗೋಮುಖಗಳು

ನೇಪಾಳದ ಮುಸ್ತಾಂಗ್ ಜಿಲ್ಲೆಯಲ್ಲಿರುವ ಅನ್ನಪೂರ್ಣ ಸಂರಕ್ಷಣಾ ಪ್ರದೇಶದ ಮುಕ್ತಿನಾಥ ಕಣಿವೆಯಲ್ಲಿ ಮುಕ್ತಿನಾಥ ಕ್ಷೇತ್ರವಿದೆ. ಸಮುದ್ರ ಮಟ್ಟದಿಂದ ಸುಮಾರು 3710 ಮೀಟರ್ ಎತ್ತರದಲ್ಲಿರುವ ಈ ದೇವಸ್ಥಾನವು ಹಿಂದೂಗಳ ಹಾಗೂ ಬೌದ್ಧರ ಪವಿತ್ರ ಸ್ಥಳವಾಗಿದೆ. ಹಿಂದೂಗಳು ಭಗವಾನ್ ನಾರಾಯಣನ ಹಾಗೂ ಬೌದ್ಧರು ಅವಲೋಕಿತೇಶ್ವರನ ಕ್ಷೇತ್ರವೆಂದೂ ನಂಬುತ್ತಾರೆ.

ಇಲ್ಲಿ ಭಗವಾನ್ ನಾರಾಯಣನ ದೇವಸ್ಥಾನವಿದ್ದು, ಅದರ ಮೂರೂ ದಿಕ್ಕುಗಳಲ್ಲೂ 108 ಪವಿತ್ರ ಜಲಧಾರೆಗಳಿವೆ. ಅವುಗಳನ್ನು ಮುಕ್ತಿಧಾರೆಗಳೆಂದು ಕರೆಯಲಾಗುತ್ತದೆ. ಅನ್ನಪೂರ್ಣ ಪರ್ವತದ ಪವಿತ್ರ ಗೋಸ್ಕೈನ್ ಕುಂಡದಿಂದ (ಸರೋವರ) ಬರುವ ನೀರು 108 ಗೋಮುಖಗಳ ಮೂಲಕ ಹರಿಯುವಂತೆ ಮಾಡಿದ್ದಾರೆ. ಈ ಎಲ್ಲಾ ಧಾರೆಗಳಲ್ಲೂ ಭಕ್ತರು ಪುಣ್ಯಸ್ನಾನ ಮಾಡುತ್ತಾರೆ. ಗುರು ಪದ್ಮಸಂಭವರು (ರಿಂಪೋಂಚೆ) ಟಿಬೆಟ್‌ಗೆ ಹೋಗುವ ದಾರಿಯಲ್ಲಿ ಇಲ್ಲಿ ಧ್ಯಾನ ಮಾಡಿದ್ದಾರೆಂದು ನಂಬುವ ಬೌದ್ಧರು ಈ ಸ್ಥಳದಲ್ಲಿ ಬುದ್ಧನ ಪ್ರತಿಮೆಯನ್ನೂ ಸ್ಥಾಪಿಸಿ ಆರಾಧಿಸುತ್ತಿದ್ದಾರೆ.

—ಬಿ. ಸತ್ಯನಾರಾಯಣ ಅರಸ, ಅರೆಬೈಲು